## ಕರ್ನಾಟಕ ವಿಧಾನ ಪರಿಷತ್ತು

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ನವೀನ್ ಅವರು ನಿಯಮ 330 ರಡಿ ಕೇಳಿರುವ ಪ್ರಶ್ನೆಗೆ ಮಾಹಿತಿ:**

**ವಿಷಯ:**

ರಾಜ್ಯದಲ್ಲಿರುವ FPO ಗಳಿಂದ ರೈತರಿಗೆ ಆಗುತ್ತಿರುವ ಅನುಕೂಲಗಳೇನು? ಇದರಿಂದ ರೈತರಿಗೆ ನೀಡುತ್ತಿರುವ ಚಟುವಟಿಕೆಗಳಾದ ತರಬೇತಿ, ತಾಂತ್ರಿಕ ಸಹಾಯ, ಯಂತ್ರೋಪಕರಣ, ಹಣಕಾಸಿನ ನೆರವು ಹಾಗೂ ರೈತರ ಮೌಲ್ಯವರ್ಧನೆ ಮಾಡಲು ಯಾವ ಸಂಸ್ಕರಣ ಘಟಕಗಳನ್ನು ಸ್ಥಾಪಿಸಲಾಗಿದೆ. ಇದರಿಂದ ರೈತರಿಗೆ ಅನುಕೂಲವಾಗಿದೆಯೇ ಎಂಬುದರ ಬಗ್ಗೆ ನಿಯಮ 330 ಅಡಿಯಲ್ಲಿ ಚರ್ಚಿಸಲು ಅವಕಾಶ ನೀಡುವಂತೆ ವಿನಂತಿಸುತ್ತೇನೆ.

**ಉತ್ತರ:**

**ರಾಜ್ಯದಲ್ಲಿರುವ ರೈತ ಉತ್ಪಾದಕರ ಸಂಸ್ಥೆಗಳಿಂದ (FPO) ರೈತರಿಗೆ ಆಗುತ್ತಿರುವ ಅನುಕೂಲಗಳು ಈ ಕೆಳಕಂಡಂತಿರುತ್ತವೆ:**

- FPO ಗಳು ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರ ಮತ್ತು ಪೀಡೆನಾಶಕ ಪರವಾನಗಿಗಳನ್ನು ಕೃಷಿ ಇಲಾಖೆಯಿಂದ ಪಡೆದು ಕ್ಷೇತ್ರ ಮಟ್ಟದಲ್ಲಿ ಕೃಷಿ ಪರಿಕರಗಳನ್ನು ನಿಗದಿತ ದರದಲ್ಲಿ ರೈತರಿಗೆ ವಿತರಿಸಲಾಗುತ್ತಿದ್ದು, ಇದರಿಂದ ಉತ್ಪಾದನಾ ವೆಚ್ಚ ಕಡಿಮೆಯಾಗಿದೆ. ಇದಲ್ಲದೆ FPO ಗಳಿಗೆ ಕೃಷಿ ಚಟುವಟಿಕೆಗೆ ಬೇಕಾಗುವ ಟಾರ್ಪಲ್, ಹನಿ ನೀರಾವರಿ ಘಟಕ/ತುಂತುರು ನೀರಾವರಿ ಘಟಕ ಹಾಗೂ ಪಶು ಅಹಾರ ಇತ್ಯಾದಿಗಳನ್ನು ಒಂದೇ ಸೂರಿನಡಿ ದೊರೆಯುವಂತೆ ಸೌಲಭ್ಯ ಒದಗಿಸಲಾಗುತ್ತಿದೆ.
- ರೈತರು ಬೆಳೆದ ಬೆಳೆ ಉತ್ಪನ್ನಗಳನ್ನು ಅವರ ಜಮೀನಿನಲ್ಲೇ FPO ರವರಿಂದ ಸಂಗ್ರಹಿಸಿ ನೇರ ಮಾರುಕಟ್ಟೆ ಸಂಪರ್ಕ ಒದಗಿಸಿ ಉತ್ತಮ ಬೆಲೆ ಸಿಗುವಂತೆ ಮಾಡಲಾಗುತ್ತಿದೆ. ಇದರಿಂದ ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಿದಂತಾಗುತ್ತದೆ.
- ಸರ್ಕಾರದ ಬೆಂಬಲ ಬೆಲೆ (MSP) ಯೋಜನೆಯಡಿ ರಾಗಿ, ಜೋಳ, ತೊಗರಿ, ನೆಲಗಡಲೆ ಬೀಜಗಳ ಖರೀದಿ ಕೇಂದ್ರಗಳಾಗಿ ರೈತ ಉತ್ಪಾದಕರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಇದರಿಂದ ಹೆಚ್ಚಿನ ರೈತರು MSP ಯೋಜನೆಯ ಪ್ರಯೋಜನೆ ಪಡೆಯಲು ಸಾಧ್ಯವಾಗುತ್ತಿದೆ.
- ರೈತರಿಗೆ ದಿನ ನಿತ್ಯದ ಅಗತ್ಯ ಸೇವೆಗಳಾದ ಬೆಳೆ ವಿಮೆ ಅರ್ಜಿ, ಪಹಣಿ, ಆಧಾರ್, ಪಾನ್, PM ಕಿಸಾನ್ ಅರ್ಜಿ ಸಲ್ಲಿಕೆ ಹಾಗೂ ಇತರೆ ಪ್ರಮುಖ ಸೇವೆಗಳನ್ನು ಒದಗಿಸಲು ವಿವಿಧ FPOಗಳು ಸಾಮಾನ್ಯ ಸೇವಾ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ.
- ರೈತರ ಬೆಳೆಗಳಿಗೆ ಕೊಯ್ಲೋತ್ತರ ನಿರ್ವಹಣೆಗಾಗಿ ಹಾಗೂ ಮೌಲ್ಯವರ್ಧನೆಗಾಗಿ FPO ಗಳಲ್ಲಿ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿದ್ದು, ಇದರಿಂದ ರೈತರ ಉತ್ಪನ್ನಗಳನ್ನು ಸಂಸ್ಕರಿಸಿ ಮಾರಾಟಮಾಡಲು ಅನುಕೂಲ ಮಾಡಿ ಉತ್ತಮ ಬೆಲೆ ದೊರಕಿಸಿಕೊಟ್ಟಿದೆ.

- FPOಗಳ ಉತ್ಪನ್ನಗಳಿಗೆ ಮಾರಾಟ ವೇದಿಕೆ ಕಲ್ಪಿಸಲು ವಿವಿಧ ಇಲಾಖೆ/ಸಂಸ್ಥೆಗಳ ವತಿಯಿಂದ ಕಾಲಕಾಲಕ್ಕೆ ಖರೀದಿದಾರರ - ಮಾರಾಟಗಾರರ ಸಮ್ಮೇಳನ, FPO ಮೇಳಗಳನ್ನು ಆಯೋಜಿಸಿ ಇದರಿಂದ ರೈತರ ಉತ್ಪನ್ನಗಳಿಗೆ ರಾಜ್ಯ/ ರಾಷ್ಟ್ರೀಯ/ ಅಂತರಾಷ್ಟ್ರೀಯ ಮಟ್ಟದಲ್ಲಿ ಮಾರುಕಟ್ಟೆ ಸಂಪರ್ಕ ಕಲ್ಪಿಸಲಾಗುತ್ತಿದೆ ಕೆಲವು ಉತ್ಪನ್ನಗಳನ್ನು ಆನ್ ಲೈನ್ ಮಾರುಕಟ್ಟೆ ಸೇವೆಯನ್ನು ಉಪಯೋಗಿಸಿ ಮಾರಾಟ ಮಾಡಲಾಗುತ್ತಿದೆ.
- ಕೆಲವು FPOಗಳು ಬಾಡಿಗೆ ಆಧಾರಿತ ಸೇವಾ ಕೇಂದ್ರಗಳು (Custom Hiring Service Centre - CHSC) ಕೇಂದ್ರಗಳನ್ನು ನಿರ್ವಹಿಸುತ್ತಿದ್ದು, ಸ್ಥಳೀಯ ರೈತರಿಗೆ ಅಗತ್ಯವಿರುವ ಯಂತ್ರೋಪಕರಣಗಳನ್ನು ಸಕಾಲದಲ್ಲಿ ದೊರೆಯುವಂತೆ ವ್ಯವಸ್ಥೆಮಾಡಲಾಗುತ್ತಿದೆ. ಇದರಿಂದ ಕೃಷಿ ಚಟುವಟಿಕೆಗಳನ್ನು ನಿಗದಿತ ಸಮಯದಲ್ಲಿ ಕೈಗೊಳ್ಳಲು ಸಹಾಯವಾಗುತ್ತಿದೆ.
- ರಾಜ್ಯದ ಕೃಷಿಕರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಹಾಗೂ ಉತ್ಪಾದನೆ, ಶೇಕರಣೆ, ಸಂಸ್ಕರಣೆ, ಮೌಲ್ಯವರ್ದನೆ ಮತ್ತು ಮಾರಾಟ ಮಾಡುವ ಧ್ಯೇಯೋದ್ದೇಶಗಳೊಂದಿಗೆ ರಾಜ್ಯ ಮಟ್ಟದಲ್ಲಿ ಕರ್ನಾಟಕ ರಾಜ್ಯ ರೈತ ಉತ್ಪಾದಕರ ಸಂಸ್ಥೆಗಳ ಸಹಕಾರ ಸಂಘ ನಿಯಮಿತ ಬೆಂಗಳೂರು ಅನ್ನು ರಚಿಸಲಾಗಿರುತ್ತದೆ.

**ತರಬೇತಿ ಮತ್ತು ತಾಂತ್ರಿಕ ಸಹಾಯ**

- ರಾಷ್ಟ್ರದಲ್ಲಿಯೇ ಪ್ರಪ್ರಥಮವಾಗಿ ನಮ್ಮ ರಾಜ್ಯದಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಸಾಮರ್ಥ್ಯ ವೃದ್ಧಿಗಾಗಿ (capacity building) ವಿಶೇಷವಾಗಿ ತರಬೇತಿ ನೀಡಲು ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವನ್ನು (CoE-FPO) ತೋಟಗಾರಿಕಾ ವಿಶ್ವವಿದ್ಯಾಲಯ, ಬಾಗಲಕೋಟೆ ಅಡಿಯಲ್ಲಿ ಸ್ಥಾಪಿಸಲಾಗಿರುತ್ತದೆ. ಈ ಸಂಸ್ಥೆಯು ಕಾಲಕಾಲಕ್ಕೆ FPO ಗಳ ನಿರ್ದೇಶಕರು ಮತ್ತು ಸಿಬ್ಬಂದಿಗಳಿಗೆ ಈ ಕೆಳಕಂಡ ವಿಷಯಗಳಲ್ಲಿ ತರಬೇತಿಗಳನ್ನು ನೀಡಲಾಗುತ್ತಿದೆ.
    - FPO ಗಳ ರಚನೆ ಮತ್ತು ಉದ್ದೇಶಗಳು.
    - ಮೌಲ್ಯವರ್ಧನೆ, ಸಂಸ್ಕರಣೆ ಮತ್ತು ಬ್ರಾಂಡಿಂಗ್ ಕುರಿತು ಅರಿವು.
    - ಮಾರುಕಟ್ಟೆ ಸಂಪರ್ಕ ಹಾಗೂ ವ್ಯಾಪಾರ ಯೋಜನೆ ರೂಪಿಸುವಿಕೆ
    - ಆಡಳಿತಾತ್ಮಕ ಹಾಗೂ ಕಾನೂನಾತ್ಮಕ ವಿಷಯಗಳು
    - ಲೆಕ್ಕಪತ್ರಗಳ ನಿರ್ವಹಣೆ, ಹಣಕಾಸು ಶಿಸ್ತು ಮತ್ತು ಆಡಿಟ್ ಪ್ರಕ್ರಿಯೆಗಳು
    - ಅಂತರಾಷ್ಟ್ರೀಯ ರಫ್ತು ಮಾರುಕಟ್ಟೆಯ ಕುರಿತು
    - FPO ಗಳ ಬೇಡಿಕೆಗೆ ಅನುಗುಣವಾಗಿ ಕಾಲಕಾಲಕ್ಕೆ ತರಬೇತಿಗಳನ್ನು ಆಯೋಜಿಸಲಾಗುತ್ತದೆ.

ಇದರ ಜೊತೆಗೆ ಹೊಸ ತಾಂತ್ರಿಕತೆಗಳ ಕುರಿತು ಅರಿವು ಮೂಡಿಸಲು ಹಾಗೂ ರೈತರಿಗೆ ಉತ್ತಮ ಕೃಷಿ ಪದ್ಧತಿಗಳನ್ನು (ಉದಾಹರಣೆ: INM & IPM) ಪರಿಚಯಿಸುವ ಮೂಲಕ ಉತ್ಪಾದನೆ ಹೆಚ್ಚಿಸಲು ತಾಂತ್ರಿಕ ಮಾರ್ಗದರ್ಶನ ಹಾಗೂ ವಿವಿಧ ಯೋಜನೆಗಳ ಕುರಿತು ಕೃಷಿ ವಿಶ್ವವಿದ್ಯಾಲಯಗಳು, ವಿವಿಧ ಇಲಾಖೆ/ ಸರ್ಕಾರಿ ಸೌಮ್ಯದ ಸಂಸ್ಥೆಗಳಾದ KAPPEC, APEDA ಹಾಗೂ VTPC ಇತ್ಯಾದಿ ಸಂಸ್ಥೆಗಳಿಂದ ಕಾಲಕಾಲಕ್ಕೆ ತರಬೇತಿಗಳನ್ನು ನೀಡಲಾಗುತ್ತದೆ.

**ಯಂತ್ರೋಪಕರಣಗಳು**

- ಗ್ರಾಮೀಣ ಮಟ್ಟದಲ್ಲಿ ಕೃಷಿ ಕಾರ್ಮಿಕರ ಕೊರತೆಯಿಂದಾಗಿ ಸಕಾಲದಲ್ಲಿ ಬೇಸಾಯ ಚಟುವಟಿಕೆಗಳನ್ನು ಕೈಗೊಳ್ಳಲು ಬಾಡಿಗೆ ಆಧಾರದಲ್ಲಿ ಯಂತ್ರೋಪಕರಣಗಳನ್ನು ಒದಗಿಸುವ ಸಲುವಾಗಿ ವಿವಿಧ ಇಲಾಖೆಗಳ ಮೂಲಕ FPOಗಳಿಗೆ ಬಾಡಿಗೆ ಆಧಾರಿತ ಸೇವ ಕೇಂದ್ರಗಳನ್ನು (ಕೃಷಿ ಯಂತ್ರಧಾರೆ) ಸ್ಥಾಪಿಸಲು ನೆರವು ನೀಡಲಾಗಿದೆ. ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಲ್ಲಿ ಈ ಕೆಳಕಂಡ ಯಂತ್ರೋಪಕರಣಗಳನ್ನು ರೈತರಿಗೆ ಒದಗಿಸಲಾಗುತ್ತಿದೆ.
  - ಟ್ರ್ಯಾಕ್ಟರ್
  - ಟ್ರ್ಯಾಕ್ಟರ್ ಚಾಲಿತ ಯಂತ್ರಗಳು
  - ಸಿಂಪರಣಾ ಯಂತ್ರಗಳು
  - ಕಟಾವು ಯಂತ್ರಗಳು
  - ಕೊಯ್ಲೋತ್ತರ ಸಂಸ್ಕರಣಾ ಯಂತ್ರಗಳು
  - ರಸಮೇವು ತಯಾರಿಕಾ ಯಂತ್ರ
  - ಡ್ರೋನ್ ಹಾಗೂ ಇತ್ಯಾದಿಗಳು.

**ಹಣಕಾಸಿನ ನೆರವು**

- ಪ್ರತಿ FPO ರಚನೆ ಮತ್ತು ಉತ್ತೇಜನಕ್ಕಾಗಿ ರಾಜ್ಯವಲಯ ಯೋಜನೆಯಡಿ ರೂ.30.00 ಲಕ್ಷಗಳವರೆಗೆ ಹಾಗೂ ಕೇಂದ್ರ ವಲಯ ಯೋಜನೆಯಡಿ ರೂ.58.00 ಲಕ್ಷಗಳ ಹಣಕಾಸಿನ ನೆರವನ್ನು ನೀಡಲಾಗಿರುತ್ತದೆ.
- ಈಕ್ವಿಟಿ ಅನುದಾನವಾಗಿ FPOಗಳ ವ್ಯವಹಾರ ಬಂಡವಾಳಕ್ಕಾಗಿ ಕೇಂದ್ರವಲಯ ಯೋಜನೆಯಡಿ ರೂ. 15.00 ಲಕ್ಷಗಳನ್ನು ಹಾಗೂ ರಾಜ್ಯವಲಯದಡಿ ರೂ. 5.00-10.00 ಲಕ್ಷ ಅನುದಾನವನ್ನು ನೀಡಲಾಗಿದೆ.
- ರೈತ ಉತ್ಪಾದಕರ ಸಂಸ್ಥೆಗಳಿಗೆ Credit Guarantee Fund ರಡಿ NABARD ವತಿಯಿಂದ ಯಾವುದೇ ಗ್ಯಾರಂಟಿ ಇಲ್ಲದೇ ರೂ. 2.00 ಕೋಟಿಗಳವರೆಗೆ ಸಾಲ ನೀಡಲಾಗುತ್ತದೆ.
- ಕೇಂದ್ರ ಸರ್ಕಾರವು ರೈತ ಉತ್ಪಾದಕರ ಸಂಸ್ಥೆಗಳಿಗೆ Agri Infrastructure Fund (AIF) ಯೋಜನೆಯಡಿ 3% ಬಡ್ಡಿ ಸಹಾಯಧನವನ್ನು ಒದಗಿಸಲಾಗುತ್ತಿದೆ.

- ರೈತ ಉತ್ಪಾದಕರ ಸಂಸ್ಥೆಗಳ ಉತ್ಪನ್ನಗಳ ಬ್ರ್ಯಾಂಡಿಂಗ್ ಮಾಡಿಸಲು ಕೇಂದ್ರ ಸರ್ಕಾರದ NFSM ಹಾಗೂ PMFME, ರಾಜ್ಯ ಸರ್ಕಾರದ ರೈತ ಸಮೃದ್ಧಿ ಯೋಜನೆಯಡಿ ಹಣಕಾಸಿನ ನೆರವು ನೀಡಲಾಗುತ್ತದೆ.
- FPO ಗಳಿಗೆ ಸಂಸ್ಕರಣಾ ಘಟಕ ಸ್ಥಾಪಿಸಲು ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ (PMFME) ಯೋಜನೆಯಡಿ ಶೇ. 35 ( 60:40 ಕೇಂದ್ರ: ರಾಜ್ಯ) ಅನುದಾನ ಜೊತೆಗೆ **ರಾಜ್ಯ ಸರ್ಕಾರದಿಂದ ಶೇ. 15 ರಷ್ಟು ಹೆಚ್ಚುವರಿ** ಅನುದಾನವನ್ನು ಒದಗಿಸಲಾಗಿದ್ದು, ಒಟ್ಟಾರೆ ಶೇ. 50 ಅನುದಾನ ನೀಡಲಾಗುತ್ತಿದೆ
- NFSM ಯೋಜನೆಯಡಿ ಗರಿಷ್ಠ 10.00 ಲಕ್ಷಗಳವರೆಗೆ ಶೇ.33 ರಷ್ಟು ಸಹಾಯಧನವನ್ನು FPO ಗಳಿಗೆ ಸಂಸ್ಕರಣಾ ಘಟಕ ಸ್ಥಾಪಿಸಲು ನೀಡಲಾಗುತ್ತಿದೆ

**ಸಂಸ್ಕರಣಾ ಘಟಕಗಳು**

- ನಬಾರ್ಡ್ ಮತ್ತು MPLADS ನಿಧಿಯ ಸಂಯೋಜನೆಯೊಂದಿಗೆ, ಕಲ್ಯಾಣ ಕರ್ನಾಟಕ ಪ್ರದೇಶದ ರೈತರಿಗೆ ಅನುಕೂಲವಾಗಲು ಏಳು ಜಿಲ್ಲೆಗಳಲ್ಲಿ ಕೃಷಿ ಸಂಸ್ಕರಣೆಗಾಗಿ ಏಳು ಸಾಮಾನ್ಯ ಸೌಲಭ್ಯ ಕೇಂದ್ರವನ್ನು ಸ್ಥಾಪಿಸಿ FPO ಗಳಿಗೆ ನಿರ್ವಹಿಸಲು ಅನುಕೂಲ ಮಾಡಿಕೊಡಲಾಗಿರುತ್ತದೆ.
- FPO ಗಳಿಗೆ ಸಂಸ್ಕರಣಾ ಘಟಕ ಸ್ಥಾಪಿಸಲು PMFME, NFSM ಹಾಗೂ ವಿಶ್ವ ಬ್ಯಾಂಕ್ ನೆರವಿನ ರಿವಾರ್ಡ್, PMKSY-2.0 (ಪ್ರವೇಶ ದ್ವಾರ ಚಟುವಟಿಕೆಗಳ)ಯೋಜನೆಗಳ ವ್ಯಾಪ್ತಿಯಲ್ಲಿ ಬರುವ ವಿವಿಧ ಇಲಾಖೆ/ ಸಂಸ್ಥೆಯ ಮೂಲಕ ರಚಿಸಿರುವ ರೈತ ಉತ್ಪಾದಕರ ಸಂಸ್ಥೆಗಳ ಮೌಲ್ಯಸರಪಳಿ ಅಭಿವೃದ್ಧಿಗೊಳಿಸಲು ರೈತರ ಉತ್ಪನ್ನಗಳ ಮೌಲ್ಯವರ್ದನೆಗೆ ಈ ಕೆಳಕಂಡ ಸಂಸ್ಕರಣಾ ಘಟಕಗಳನ್ನು FPO ಗಳಿಗೆ ಒದಗಿಸಲಾಗಿರುತ್ತದೆ.
  - ಬೆಳೆ ಸಂಸ್ಕರಣಾ ಘಟಕ,
  - ಎಣ್ಣೆ ತೆಗೆಯುವ ಯಂತ್ರ,
  - ಮೆಣಸಿನಕಾಯಿ ಸಂಸ್ಕರಣಾ ಘಟಕ,
  - ಅರಿಶಿಣ ಸಂಸ್ಕರಣಾ ಘಟಕ
  - ಜ್ಯೂಸ್ ಮತ್ತು ಪಲ್ಪ್ ತೆಗೆಯುವ ಯಂತ್ರ
  - ಹುಣಸೆ ಪಲ್ಪ್ ತೆಗೆಯುವ ಯಂತ್ರ
  - ಅಡಿಕೆ ತಟ್ಟೆ ಮಾಡುವ ಯಂತ್ರ
  - Vacuum packing ಯಂತ್ರ
  - Spray dryer ಮತ್ತು ಇತ್ಯಾದಿಗಳು

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು

**ಸಂಖ್ಯೆ: AGRI/29/AML/2026**